ಓ.ಎಸ್.ನಂ.268/2025

ಪಿ ಡಬ್ಲ್ಯೂಃ 1

ದಿನಾಂಕ 19.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆಯನ್ನು ನಕಾಶೆಯ ಪ್ರಕಾರ ಇರುವ ರಸ್ತೆಯ ಕುರಿತು ಹೂಡಿರುತ್ತೇನೆ. ಸದರಿ ನಕಾಶೆಯಲ್ಲಿ ಬಂಡಿ ದಾರಿ ಇರುವುದಾಗಿ ತೋರಿಸಲಾಗಿರುತ್ತದೆ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಂಡಿ ದಾರಿಯ ಕುರಿತು ನಕಾಶೆಯಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಿಪಿ 18 ರ ನಕಾಶೆಯಲ್ಲಿ ಕಾಲು ದಾರಿ ಎಂದು ಕಾಣಿಸಿದ್ದರೂ ಸಹ ಬಂಡಿ ದಾರಿ ಇರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಿಪಿ 18 ರಲ್ಲಿ ಕಾಣಿಸಿರುವ ಕಾಲು ದಾರಿ ಸುಮಾರು ವರ್ಷಗಳಿಂದ ಉಪಯೋಗಿಸುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಕಬ್ಬು, ಬೆಳ್ಳುಳ್ಳಿ ಮತ್ತು ಶೆಂಗಾ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ನಿಪಿ 18 ರಲ್ಲಿ ಕಾಣಿಸುವ ದಾರಿಯು ಮಲಕನಹಳ್ಳಿ ಗ್ರಾಮ ಠಾಣಾ ಆಸ್ತಿಗೆ ಕೂಡುತ್ತದೆ. ಸದರಿ ರಸ್ತೆಯು ಮಲಕನಹಳ್ಳಿ ಗ್ರಾಮದ ಮನೆಗಳಿಗೆ ಕೊನೆಗೊಳ್ಳುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ಸುಮಾರು 50 ವರ್ಷಗಳಿಂದ ಸಾರ್ವಜನಿಕರು ಸಂಪ್ರದಾಯಕವಾಗಿ ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ಪಕ್ಕ ವಿದ್ಯುತ್ ಕಂಬಗಳು ಮತ್ತು ಅಂಗನವಾಡಿ ಕೇಂದ್ರ ಇವೆ ಎಂದರೆ ಸಾಕ್ಷಿಯು ವಿದ್ಯುತ್ ಕಂಬಗಳು ಇರುವುದಾಗಿ ನುಡಿಯುತ್ತಾರೆ. ಅಂಗನವಾಡಿ ಕೇಂದ್ರಕ್ಕೆ ಸದರಿ ರಸ್ತೆಯಿಂದ ಮುಂದಕ್ಕೆ ಬೇರೆ ಮಾರ್ಗದ ಮೂಲಕ ತಲುಪುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಮೂಲಕ ಆಂಜನೇಯ ದೇವಸ್ಥಾನಕ್ಕೆ ಒಡಾಡುತ್ತಾರೆ ಎಂದರೆ ಸರಿಯಲ್ಲ.

3. ನಿಪಿ 18 ರಲ್ಲಿ ಕಾಣಿಸುವ ರಸ್ತೆಯು ಸರ್ವೆ ನಂ 20 ಮತ್ತು 21 ರ ಆಸ್ತಿಗಳಿಗೆ ವಹಿವಾಟು ಮಾಡಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 20 ಮತ್ತು 21 ರ ಆಸ್ತಿಗಳ ನಡುವೆ ಇರುವ ಸಾಂಪ್ರದಾಯಿಕ ರಸ್ತೆಯಲ್ಲಿ ಸಾರ್ವಜನಿಕರು ಕುಮದ್ವತಿ ನದಿಗೆ ಒಡಾಡುತ್ತಾರೆ ಎಂದರೆ ಸರಿ. ಸದರಿ ರಸ್ತೆಯಲ್ಲಿಯೇ ನಮ್ಮ ಪೂರ್ವ ಮಾಲಿಕರು ಒಡಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಮಾಲಿಕರು ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಯಾವುದೇ ತಂಟೆ ತಕರಾರು ಮಾಡಿರಲಿಲ್ಲ ಎಂದರೆ ಸರಿಯಲ್ಲ.

4. ಸದರಿ ಆಸ್ತಿಗಳಲ್ಲಿ ಯಾರು ತಂಟೆ ತಕರಾರು ಮಾಡಬಾರದು ಎಂದು ಓ ಎಸ್ ನಂ

328/2024ರ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ಇನ್ನೂ ಚಾಲ್ತಿಯಲ್ಲಿ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ನಮ್ಮ ಜಮೀನನ್ನು ಒಂದು ವರ್ಷದಿಂದ ವಹಿವಾಟು ಮಾಡಿಕೊಂಡಿರುತ್ತೇನೆ. ಸದರಿ ಆಸ್ತಿಯನ್ನು ರವೀಂದ್ರ ಭಂಗಿಗೌಡರ ರವರಿಂದ ಖರೀದಿಸಿರುತ್ತೇನೆ. ನಾನು ಪ್ರತಿವಾದಿಗಳ ವಿರುದ್ಧ ಬೇರೆಯವರ ಮಾತು ಕೇಳಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಯಾರು ವಹಿವಾಟು ಮಾಡುತ್ತಿದ್ದಾರೆ ಎಂದು ನ್ಯಾಯಲಯದಿಂದ ಕಮಿಷನರ್ ನೇಮಕ ಮಾಡಲು ನನ್ನ ಅಭ್ಯಂತರ ಇರುವುದಿಲ್ಲ.

**5.** ಪ್ರತಿವಾದಿಗಳು ದಾವಾ ರಸ್ತೆಯಲ್ಲಿ ಹಲವು ವರ್ಷಗಳಿಂದ ಬೆಳೆ ಬೆಳೆಯುತ್ತಿರುವ ಕಾರಣ ಈ ದಾವೆ ಹೂಡಿರುತ್ತೇನೆ ಎಂದರೆ ಸಾಕ್ಷಿಯು ರಸ್ತೆ ಬಿಟ್ಟು ಬೆಳೆ ಬೆಳೆಯುತ್ತಿರುವುದಾಗಿ ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಹಾತ್ ನಕಾಶೆ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನಾಗಲಿ ಅಥವಾ ಉಳಿದ ಪ್ರತಿವಾದಿಗಳು ವಹಿವಾಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ ನ ಮೂಲ ಮಾಲಿಕರಿಗೆ ದಾವಾ ರಸ್ತೆಯ ಕುರಿತು ಯಾವುದೇ ತಕರಾರು ಮಾಡಿರಲಿಲ್ಲ ಎಂದರೆ ಸಾಕ್ಷಿಯು ನಾನು ಖರೀದಿಸಿದ ನಂತರ ತಕರಾರು ಮಾಡಿರುವುದಾಗಿ ನುಡಿಯುತ್ತಾರೆ.

**ಮುಂದೂವರೆದ ಪಾಟಿ ಸವಾಲಿಗೆ ಸಮಯಕೋರಿದ್ದರಿಂದ ಮುಂದೂಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.